MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - MONDAY 7-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಪಾಮೆಣ್ಣೆ ಪೂರೈಕೆ ಹೆಚ್ಚಳಕ್ಕೆ ಭಾರತದಿಂದ ಇಂಡೋನೇಶಿಯಾಕ್ಕೆ ಮನವಿ**

ಕೆಲವು ಮೂಲಗಳ ಪ್ರಕಾರ ಭಾರತಕ್ಕೆ ಪಾಮೆಣ್ಣೆ ಪೂರೈಕೆ ಹೆಚ್ಚಳಗೊಳಿಸುವಂತೆ ಇಂಡೋನೇಶಿಯಾಕ್ಕೆ ಭಾರತ ಕೇಳಿಕೊಂಡಿದೆಯೆನ್ನಲಾಗಿದೆ.

**ಪರ್ಯಾಯ ಖಾದ್ಯತೈಲ ದರ ಹೆಚ್ಚಳದಿಂದ ಕೊಬ್ಬರಿ ಎಣ್ಣೆ ಬೇಡಿಕೆ ಹೆಚ್ಚಳ ಸಾಧ್ಯತೆ**

ಆಮದಿತ ಕಡಿಮೆ ದರದ ಪಾಮೆಣ್ಣೆ, ಸೂರ್ಯಕಾಂತಿ ಎಣ್ಣೆ ಹಾಗೂ ಸೋಯಬೀನ್ ದರಗಳು ಹೆಚ್ಚಳವಾಗಿರುವುದರಿಂದ ಹಾಗೂ ತೆಂಗಿನೆಣ್ಣೆ ದರ ಇತರ ಖಾದ್ಯ ತೈಲಗಳಿಗೆ ತುಲನೆ ಮಾಡಿದಾಗ ಪರ್ಯಾಯ ಬಳಕೆಗೆ ಪೂರಕವಿರುವುದರಿಂದ ಕೊಬ್ಬರಿ ಎಣ್ಣೆ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹಿಂದಿನ ವರ್ಷ ಕೊಬ್ಬರಿ ಎಣ್ಣೆ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹಿಂದಿನ ವರ್ಷ ತೆಂಗಿನೆಣ್ಣೆ ದರ ಹೆಚ್ಚಳವಾಗಿದ್ದಾಗ ಕೆಲವು ಬಳಕೆದಾರರು ಇತರ ಕಡಿಮೆ ದರದ ಖಾದ್ಯ ತೈಲ ಬಳಕೆಗೆ ತೊಡಗಿರುವುದರಿಂದ ತೆಂಗಿನೆಣ್ಣೆ ಬೇಡಿಕೆ ಇಳಿಕೆಯಾಗಿತ್ತು. ಈ ವರ್ಷ ಅವರು ಮತ್ತೆ ತೆಂಗಿನೆಣ್ಣೆ ಖರೀದಿ ಮಾಡುವ ಸಾಧ್ಯತೆಯಿದೆ.

**ಪೌಲ್ಟ್ರಿ ಫೀಡ್ಸ್ ದರ ಹೆಚ್ಚಳ. ಕೋಳಿ ಸಾಕಣೆ ದುಬಾರಿ**

ಪೌಲ್ಟ್ರಿ ಫೀಡ್ಸ್ (ಕೋಳಿ ಆಹಾರ) ಪ್ರಮುಖ ಘಟಕಗಳಿಂದ ಸೋಯಾಮೀಲ್ ಹಾಗೂ ಜೋಳ ದರ ಸತತ ಹೆಚ್ಚಳದಲ್ಲಿರುವುದರಿಂದ ಪೌಲ್ಟ್ರಿ ಫೀಡ್ಸ್ ದರ ಹೆಚ್ಚಳವಾಗಿದೆ. ಇದರಿಂದ ಕೋಳಿ ಸಾಕಣೆ ವೆಚ್ಚ ಹೆಚ್ಚಳವಾಗಿ ನಿರ್ವಹಣೆ ದುಬಾರಿಯಾಗಿದೆಯೆನ್ನಲಾಗಿದೆ. ಪೂರೈಕೆಯೂ ಸಾಕಷ್ಟು ಆಗುತ್ತಿಲ್ಲವೆನ್ನಲಾಗಿದೆ. ದರಗಳು ಸತತ ಹೆಚ್ಚಳದಲ್ಲಿರುವ ಸಾಧ್ಯತೆಯಿದೆ.

**ಉತ್ಪಾದನೆ ಇಳಿಕೆ, ಬೇಡಿಕೆ ಹೆಚ್ಚಳ ಕೆಂಪು ಮೆಣಸಿನಕಾಯಿ ದರ ಹೆಚ್ಚಳ**

ಈ ವರ್ಷ ಪ್ರಮುಖ ಬೆಳೆಯುವ ಪ್ರದೇಶಗಳಲ್ಲಿ ಪ್ರತಿಕೂಲ ಹವಾಮಾನ, ಅಕಾಲಿಕ ಮಳೆ, ರೋಗ ಬಾಧೆ ಹಾಗೂ ಕೆಲವು ಪ್ರದೇಶಗಳಲ್ಲಿ ಬೆಳೆಯ ಪ್ರದೇಶ ಇಳಿಕೆ ( ಕೃಷಿ ಪ್ರದೇಶ ಇಳಿಕೆ) ಯಿಂದ ಕೆಂಪು ಮೆಣಸು ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. ಬೇಸಿಗೆ ಬೇಡಿಕೆ ಹೆಚ್ಚಳವಾಗುತ್ತಿದೆ. ಉತ್ತಮ ಗುಣಮಟ್ಟದ ಮೆಣಸು ಸಾಕಷ್ಟು ಲಭ್ಯತೆಯಾಗುತ್ತಿಲ್ಲದ್ದರಿಂದ ದರ ಹೆಚ್ಚಳವಿದೆಯೆನ್ನಲಾಗಿದ್ದು ಬೇಡಿಕೆ ಹೆಚ್ಚಳದ ಸಂಭವವಿರುವುದರಿಂದ ದರ ಹೆಚ್ಚಳ ಸಾಧ್ಯತೆಯಿದೆ.